**ರಾಮಕೃಷ್ಣ ಮಿಷನ್ ಆಶ್ರಮ**
(ರಾಮಕೃಷ್ಣ ಮಿಷನ್, ಬೇಲೂರು ಮಠದ ಒಂದು ಶಾಖಾಕೇಂದ್ರ)
**ಸೆಕ್ಟರ್ 15-ಬಿ, ಮಧ್ಯ ಮಾರ್ಗ**
**ಚಂಡೀಗಢ -160 015**
ಫೋನ್: 0172 - 2549477
E-mail: rkmachandigarh@gmail.com
Website: www.rkmachandigarh.org



ನಿರ್ಮಿಸಲು ಉದ್ದೇಶಿಸಿರುವ **'ವಿಶ್ವಭಾವೈಕ್ಯ ಧ್ಯಾನಮಂದಿರ'** ಹಾಗೂ **ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರ**

# ಒಂದು ವಿನಮ್ರ ವಿನಂತಿ

## ನೂತನ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರದ ನಿರ್ಮಾಣ

ಆತ್ಮೀಯ ಭಕ್ತಬಾಂಧವರೇ ಹಾಗೂ ಹಿತೈಷಿಗಳೆ,

ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮವು 1955ರಲ್ಲಿ ಸ್ಥಾಪಿತವಾಯಿತು. ಅಂದಿನಿಂದ ಚಂಡೀಗಢ ಆಶ್ರಮವು ಶಾಂತಿಯನ್ನರಸಿ ಬರುವವರಿಗೆ ಆಧ್ಯಾತ್ಮಿಕ ಪರಿಹಾರ, ನೆಮ್ಮದಿಯನ್ನು ನೀಡುತ್ತಾ ಬಂದಿದೆ; ಅದಲ್ಲದೆ ಉಚಿತ ವೈದ್ಯಕೀಯ ಸೇವೆ, ಕಾಲೇಜು ವಿದ್ಯಾರ್ಥಿಗಳಿಗಾಗಿ 'ವಿವೇಕಾನಂದ ಸ್ಟೂಡೆಂಟ್ಸ್ ಹೋಮ್' ಎಂಬ ವಿದ್ಯಾರ್ಥಿ ನಿಲಯ, ಶಾಲೆ-ಕಾಲೇಜುಗಳಿಗೆ ಮೌಲ್ಯಶಿಕ್ಷಣ ಕಾರ್ಯಕ್ರಮಗಳು, ಪ್ರೇರಣಾತ್ಮಕ ಹಾಗೂ ಉನ್ನತ ಮೌಲ್ಯಗಳನ್ನು ಹರಡುವ ಸಾಹಿತ್ಯದ ಪ್ರಸರಣ - ಇವೇ ಮೊದಲಾದ ಚಟುವಟಿಕೆಗಳನ್ನು ನಡೆಸುತ್ತಿದೆ.

ಕಳೆದ ಎರಡು ದಶಕಗಳಿಂದ ಈ ಸೇವಾಕಾರ್ಯಗಳು ಸುಸ್ಥಿರವಾಗಿ ವ್ಯಾಪಕಗೊಳ್ಳುತ್ತಿವೆ. ಆಶ್ರಮಕ್ಕೆ ಆಗಮಿಸುವ, ಇಲ್ಲಿನ ದೈನಂದಿನ ಚಟುವಟಿಕೆಗಳಾದ ಬೆಳಗಿನ ಮಂಗಳಾರತಿ, ಸಂಧ್ಯಾರತಿಗಳಲ್ಲಿ ಪಾಲ್ಗೊಳ್ಳುವ ಹಾಗೂ ಇಲ್ಲಿ ನಡೆಯುವ ಧ್ಯಾನ, ತರಬೇತಿ ಶಿಬಿರ, ಸತ್ಸಂಗ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಭಕ್ತರ ಸಂಖ್ಯೆ ಗಣನೀಯವಾಗಿ ವೃದ್ಧಿಗೊಂಡಿದೆ.

ಹೊಸ ಅಗತ್ಯಗಳಿಗೆ ಅನುಗುಣವಾಗಿ ಆಶ್ರಮದಲ್ಲಿ ಈ ಕೆಳಗಿನ ಹೊಸ ಕಟ್ಟಡಗಳ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ:

| | | |
|---|---|---|
| 1) ವಿಶಾಲವಾದ ಧ್ಯಾನಮಂದಿರ ಹಾಗೂ ಸಾಧುನಿವಾಸ | - | 1.3 ಕೋಟಿ ರೂಪಾಯಿ ಅಂದಾಜು ವೆಚ್ಚ |
| 2) ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರ | - | 2.1 ಕೋಟಿ ರೂಪಾಯಿ ಅಂದಾಜು ವೆಚ್ಚ |
| **ಈ ಯೋಜನೆಗೆ ತಗಲಬಹುದಾದ ಒಟ್ಟು ಮೊತ್ತ** | **-** | **3.4 ಕೋಟಿ ರೂಪಾಯಿ ಅಂದಾಜು ವೆಚ್ಚ** |



ರಾಮಕೃಷ್ಣ ಮಹಾಸಂಘದ 11ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಗಂಭೀರಾನಂದಜಿ ಮಹಾರಾಜ್ ಅವರು 1985ರ ನವಂಬರ್ 24ರಂದು 'ವಿಶ್ವಭಾವೈಕ್ಯ ಧ್ಯಾನಮಂದಿರ'ದ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸುತ್ತಿರುವುದು.



ನೂತನ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರದ ನಿರ್ಮಾಣಕಾರ್ಯ ಪ್ರಗತಿಯಲ್ಲಿರುವುದು.

ಈ ಕಾರ್ಯಕ್ಕೆ ದೇಣಿಗೆ ನೀಡಬಯಸುವವರು ಚೆಕ್, ಡಿಡಿ ಇವುಗಳನ್ನು **'RAMAKRISHNA MISSION ASHRAMA, CHANDIGARH'** ಹೆಸರಿನಲ್ಲಿ ತೆಗೆದು, ಆಶ್ರಮದ ವಿಳಾಸಕ್ಕೆ ಕೊರಿಯರ್, ತ್ವರಿತ ಅಂಚೆ (speed post) ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಬಹುದು. ನೇರವಾಗಿ ಬ್ಯಾಂಕಿಗೆ ಹಣ ವರ್ಗಾವಣೆ ಮಾಡುವವರಿಗೆ ಖಾತೆ ವಿವರಗಳು:

**1. ICICI A/c No. - 001301029198, Branch - Sector 15-C, Chandigarh, IFSC - ICIC0002429**
**2. IDBI A/c No. - 003104000083216, Branch - Sector 8-C, Chandigarh, IFSC - IBKL0000003**

(ದಯವಿಟ್ಟು ಹಣ ವರ್ಗಾವಣೆ ಮಾಡಿದ ವಿವರ, ನಿಮ್ಮ ವಿಳಾಸ, ಫೋನ್ ನಂ. ಇವುಗಳನ್ನು ಅದೇ ದಿನದಂದು ಇ-ಮೇಲ್ ಮೂಲಕ ನಮಗೆ ತಿಳಿಸಬೇಕಾಗಿ ವಿನಂತಿ)

*ಆಶ್ರಮದ ವಿಳಾಸ:*
**Ramakrishna Mission Ashrama, Sector 15-B, Madhya Marg, Chandigarh - 160015**
Tel: 0172-2549477 E-mail: rkmachandigarh@gmail.com

ಭಗವಾನ್ ಶ್ರೀರಾಮಕೃಷ್ಣರ ಸೇವೆಯಲ್ಲಿ
ಸ್ವಾಮಿ ಸತ್ಯೇಶಾನಂದ
ಕಾರ್ಯದರ್ಶಿಗಳು, ರಾಮಕೃಷ್ಣ ಮಿಷನ್ ಆಶ್ರಮ, ಚಂಡೀಗಢ



# ಭಗವಲ್ಲೀಲೆ

ರಾಯರು ಭಾಗವತ ಪುಸ್ತಕವನ್ನೋದುತ್ತಿದ್ದಂತೆ, ಅವರ ಮನಸ್ಸಿನಲ್ಲೊಂದು ಸಂದೇಹ ಮೂಡಿ ಬಂತು: ಭಗವಂತನು ಧರ್ಮ ಸಂಸ್ಥಾಪನೆಗಾಗಿ ಜಗತ್ತಿನಲ್ಲಿ ಮತ್ತೆ ಮತ್ತೆ ಅವತಾರವೆತ್ತಿ ಬರುತ್ತಾನಂತೆ. ಅವನು ಸರ್ವಶಕ್ತನಾಗಿದ್ದರೆ, ಒಂದು ಅವತಾರದಲ್ಲೇ ಅಧರ್ಮವನ್ನೆಲ್ಲ ನಾಶಮಾಡಬಹುದಲ್ಲವೆ? ಮತ್ತೆ ಅಧರ್ಮಿಗಳೇ ಹುಟ್ಟದಂತೆ ಮಾಡಿದರೆ, ಪದೇ ಪದೇ ಅವತಾರವೆತ್ತಿ ಬರುವ ಅಗತ್ಯವೇನಿದೆ? ಎಲ್ಲರೂ ಧರ್ಮಾತ್ಮರಾಗಿದ್ದು, ಎಲ್ಲೆಲ್ಲೂ ಧರ್ಮವೇ ನೆಲೆಸಿರುವುದಲ್ಲವೆ?

ಈ ಆಲೋಚನೆ ಬಂದೊಡನೆ ಪುಸ್ತಕವನ್ನು ಕೆಳಗಿಟ್ಟು , ಒಂದು ಕ್ಷಣ ತನ್ನ ತಾಯಿಯತ್ತ ನೋಡಿದರು ರಾಯರು. ಅವರ ತಾಯಿಗೆ ಕಣ್ಣು ಕಾಣಿಸದು, ಮಗನೇ ಭಾಗವತ ಓದಿ ಹೇಳಬೇಕು. ಪ್ರತಿದಿನ ಭಗವಂತನ ಕಥೆಯನ್ನು ಕೇಳುತ್ತ ಅವರು ಆನಂದಪಡುತ್ತಾರೆ. ಅವರಿಗೆ ತನ್ನ ಆಲೋಚನೆಯನ್ನು ಹೇಳಿದರೆ ಅವರು ಏನೆನ್ನುವರೋ! ತಡೆಯಲಾರದೆ ರಾಯರು ಹೇಳಿಯೇಬಿಟ್ಟರು: ''ಅಮ್ಮಾ, ಭಗವಂತ ಸರ್ವಶಕ್ತನಲ್ಲವೆ? ಹಾಗಿದ್ದರೆ ಅವನು ಒಂದೇ ಅವತಾರದಲ್ಲಿ ಎಲ್ಲ ಅಧರ್ಮವನ್ನೂ ತೊಲಗಿಸಲಿಲ್ಲ ಏಕೆ? ಮತ್ತೆ ಮತ್ತೆ ಅಧರ್ಮ ಮಾಡುವಂತೆ ಜನರನ್ನು ಪ್ರೇರೇಪಿಸದಿದ್ದರೆ ಅಧರ್ಮವಾರೂ ಎಲ್ಲಿ ಹುಟ್ಟೀತು? ಜನರ ಅಜ್ಞಾನಕ್ಕೆ ಕಾರಣವೆಲ್ಲಿ? ಇದಕ್ಕೆ ಏನನ್ನುತ್ತೀಯಾ?'' ಅವರ ತಾಯಿ ಒಂದು ಕ್ಷಣ ಚಿಂತಿಸಿದರು. ಅನಂತರ ಮುಗುಳುನಗೆ ಬೀರುತ್ತ, ''ಎಲ್ಲ ಅವನ ಲೀಲೆ. ಜಗತ್ತನ್ನು ಸೃಷ್ಟಿಸಿದವನೂ ಅವನೆ, ಧರ್ಮ-ಅಧರ್ಮ ಅಂತೆಲ್ಲ ಮಾಡಿದವನೂ ಅವನೆ. ಜನರ ಮನಸ್ಸಿನಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ಹುಟ್ಟಿಸುವವನೂ ಅವನೆ. ಅವನಿಗೆ ಸರಿ ಕಂಡಾಗ ಭೂಮಿಗಿಳಿದು ಬರುತ್ತಾನೆ, ಜನರಿಗೆ ದಾರಿ ತೋರುತ್ತಾನೆ. ಅವನು ಸರ್ವಶಕ್ತನಾದ ಮಾತ್ರಕ್ಕೆ, ನಿನಗೋ ನನಗೋ ಬೇಕಾದ ಹಾಗೆ ಜಗತ್ತನ್ನು ನಡೆಸಬೇಕೆಂದಿದೆಯೆ?'' ಎಂದರು.

ಅವರ ಕೊನೆಯ ಮಾತು ರಾಯರನ್ನು ತಟ್ಟಿತು. ಹೌದಲ್ಲ! ನಮ್ಮ ನಮ್ಮ ಭಾವನೆ, ಆಶೋತ್ತರಗಳಿಗೆ ತಕ್ಕಂತೆ ಭಗವಂತ ಹಾಗೆ ಮಾಡಬೇಕು, ಹೀಗಿರಬೇಕು ಎಂದೆಲ್ಲ ನಾವು ಬಯಸುವುದು ಎಷ್ಟು ಸರಿ? ಸರ್ವತಂತ್ರ-ಸ್ವತಂತ್ರನಾದ ಭಗವಂತ ಎಲ್ಲವನ್ನೂ ಬಲ್ಲ. ಯಾರಿಗೆ ಯಾವುದು ಒಳಿತು, ಜಗತ್ತು ಹೇಗಿದ್ದರೆ ಸರಿ ಎಂಬುದು ಅವನಿಗೇ ಎಲ್ಲರಿಗಿಂತ ಹೆಚ್ಚು ತಿಳಿದಿದೆ. ನಮ್ಮ ಸೀಮಿತ ಅರಿವಿನಿಂದ ಅದನ್ನು ಅರಿಯಬಲ್ಲೆವೆ?

### ಲೀಲಾಚಿಂತನ

ಭಾಗವತದಂತಹ ಕೃತಿಗಳು ಭಗವಂತನ ಲೀಲೆಯನ್ನು ವಿಸ್ತಾರವಾಗಿ ವರ್ಣಿಸುತ್ತವೆ. ಸಾಂಪ್ರದಾಯಿಕ ಮನೆಗಳಲ್ಲಿ ಗೀತೆ, ಭಾಗವತ, ಪುರಾಣಗಳನ್ನು ನಿತ್ಯ ಪಾರಾಯಣ ಮಾಡುವ ಕ್ರಮ ಹಿಂದಿನಿಂದಲೂ ಇದೆ. ಈ ಪರಿಪಾಠದ ಹಿಂದಿರುವ ಉದ್ದೇಶ - ಭಗವಂತನ ಲೀಲಾಕಥನ ಪುಣ್ಯಕರ; ಮನದ ಮಾಲಿನ್ಯವನ್ನು ಅದು ದೂರಮಾಡುವುದು. ಭಗವಂತನ ಕೃಪೆ ನಮ್ಮೆಡೆಗೆ ಸುಲಭವಾಗಿ ಹರಿದು ಬರುವುದು - ಎಂದು. ಪ್ರಾಪಂಚಿಕ ಜೀವನದಲ್ಲಿ ಮುಳುಗಿ ಹೋದ ಮನಸ್ಸು ಅಷ್ಟು ಸುಲಭವಾಗಿ ಭಗವಂತನೆಡೆಗೆ ಹರಿಯದು; ನಾನಾ ಬಗೆಯ ಜಂಜಡಗಳು ಅದನ್ನು ಕಟ್ಟಿಹಾಕುವವು. ಭಗವಲ್ಲೀಲೆಯನ್ನು ವಿವರಿಸುವ ಕೃತಿಗಳು ಅಂಥವರ ಮನಸ್ಸನ್ನು ಸುಲಭವಾಗಿ ಭಗವಂತನೆಡೆಗೆ ತಿರುಗಿಸುವುದು. ಮನಸ್ಸನ್ನು ಸೆಳೆಯುವ ಕಥೆಗಳು ಯಾರಿಗೆ ಇಷ್ಟವಾಗದು? ಆದರೆ ಹಾಗೆ ಸೆಳೆದ ಮನಸ್ಸನ್ನು ಎತ್ತರಕ್ಕೆ ಏರಿಸುವ ವಿಶೇಷಗುಣ ಪುರಾಣಗಳಿಗಿವೆ. ನವರಸಭರಿತ ಕತೆ, ಕಾದಂಬರಿಗಳು ಕೂಡ ಮನಸ್ಸನ್ನು ಆಕರ್ಷಿಸುವುವು. ಆದರೆ ಅವು ಮನಸ್ಸನ್ನು ಎತ್ತರಕ್ಕೊಯ್ಯುವ ಬದಲು, ಅದನ್ನು ಇಂದ್ರಿಯ ಸುಖ - ಪ್ರಾಪಂಚಿಕ ವಿಷಯಗಳತ್ತ ತಳ್ಳುವುವು. ಭಗವಂತನ ಅವತಾರಗಳ ಕಥೆಯನ್ನು ಸಾರುವ ಯಾವುದೇ ಗ್ರಂಥಗಳು ಓದುಗನ ಮನಸ್ಸನ್ನು ಸೂರೆಗೊಳ್ಳುವುವು; ಅದರೊಂದಿಗೆ ಅವನ ಪ್ರಾಪಂಚಿಕತೆಯನ್ನೂ ದೂರ ಮಾಡಿ, ಭಕ್ತಿ-ಜ್ಞಾನ-ವೈರಾಗ್ಯಗಳನ್ನು ಹೆಚ್ಚಿಸುವುವು. ಗ್ರಂಥವನ್ನು ಓದುವಾಗಲೂ, ಓದಿದ ಮೇಲೂ ಅವನ ಮನಸ್ಸು ಭಗವಂತನನ್ನು ಕುರಿತು ಚಿಂತಿಸುತ್ತಿರುವುದು. ಭಗವಂತನ ಲೀಲೆಯ ವಿವಿಧ ಕಥೆಗಳು ಓದುಗನ ಮನಸ್ಸನ್ನು ವಿವಿಧ ಬಗೆಯಲ್ಲಿ ಪ್ರಭಾವಿಸಿ, ಅವನು ಆ ಘಟನೆಗಳನ್ನು ಆಗಾಗ

ನೆನೆಪಿಸಿಕೊಳ್ಳುವನು. ಅವನಿಗರಿವಿಲ್ಲದೆಯೇ ಭಗವಂತನ ಜೀವನದ ಚಿತ್ರಗಳು ಕಣ್ಣಮುಂದೆ ಹಾದುಹೋಗುವುವು. ಪ್ರತಿದಿನವೂ ಸಾಂಸಾರಿಕ ತಾಪತ್ರಯದಲ್ಲಿ ನೊಂದು ಬೆಂದವರು ಈ ರೀತಿ ಭಗವಂತನ ಚಿಂತನೆ ಎಷ್ಟು ಹೊತ್ತು ಮಾಡುತ್ತಾರೋ, ಅಷ್ಟು ಹೊತ್ತಾದರೂ ಅದು ಪರಮಪವಿತ್ರವಾದ ಕ್ಷಣಗಳಲ್ಲವೆ? ಐದು ನಿಮಿಷವಾಗಲಿ, ಅರ್ಧ ಗಂಟೆಯಾಗಲಿ – ಅವನ ಮನಸ್ಸು ಭಗವತ್ಕಥೆಯಲ್ಲಿ ತಲ್ಲೀನವಾಗುವುದರಿಂದ, ಅವನಿಗರಿವಿಲ್ಲದೆಯೇ ಭಗವಂತನ ಕೃಪೆಯಲ್ಲಿ ಅವನು ಮಿಂದೇಳುವನು. ಹೀಗೆ ಭಗವಲ್ಲೀಲೆಯಲ್ಲಿ ತನ್ಮಯವಾಗುವ, ಅವತಾರ ಪುರುಷರ ಜೀವನದ ಘಟನೆಗಳಲ್ಲಿ ಮೈಮರೆಯುವ ಭಕ್ತನು ಸಾಧ್ಯವಾದಾಗಲೆಲ್ಲ ಭಗವಂತನ ಕಥೆಯನ್ನು ಪ್ರಯತ್ನಪೂರ್ವಕ ಕಣ್ಣಮುಂದೆ ತಂದುಕೊಳ್ಳುವನು. ಇದೂ ಒಂದು ಬಗೆಯ ಸಾಧನೆ. ಭಕ್ತಿಶಾಸ್ತ್ರದಲ್ಲಿ ಇದನ್ನು 'ಸ್ಮರಣ ಭಕ್ತಿ' ಯೆಂದು ಕರೆಯಲಾಗಿದೆ. ಅವತಾರಪುರುಷರ ಲೀಲೆಯನ್ನು ಪ್ರಯತ್ನಪೂರ್ವಕ ನೆನೆಯುತ್ತಾ, ಆ ಮೂಲಕ ಭಗವಂತನ ಸ್ಮರಣೆಯನ್ನು ನಿರಂತರ ಕಾಯ್ದುಕೊಳ್ಳುವುದೇ 'ಲೀಲಾಚಿಂತನೆ'. ಇದು ಸುಖಕರವೂ, ಪವಿತ್ರವೂ, ದಿವ್ಯವೂ ಆದ ಕಾರ್ಯ. ಶ್ರಮದಾಯಕವಲ್ಲದ, ಅತ್ಯಂತ ಲಾಭಕರವಾದ ಈ ಪ್ರಯತ್ನವನ್ನು ಯಾರು ತಾನೇ ಮಾಡಲಾರರು?

### ಅವತಾರ, ಲೀಲೆ

ಭಾಗವತದ ಪ್ರಕಾರ, ಭಗವಂತನು ಭಕ್ತರನ್ನು ಉದ್ಧರಿಸುವ ಸಲುವಾಗಿ ಅವತಾರವೆತ್ತಿ ಬರುತ್ತಾನೆ. ಅವತಾರ ಎಂದರೆ 'ಇಳಿದು ಬರುವುದು.' ಭಗವಂತನ ನಿಜವಾದ ನೆಲೆ ಅವ್ಯಕ್ತದಲ್ಲಿ ; ಅತಿ ಸೂಕ್ಷ್ಮವೂ, ಅಗ್ರಾಹ್ಯವೂ ಆದ ದಿವ್ಯಧಾಮದಲ್ಲಿ. ಅದನ್ನು ಕಾಣಬಲ್ಲವರು ಪರಮಭಕ್ತರೂ, ಋಷಿಮುನಿಗಳೂ ಆದ ಮಹಾತ್ಮರು ಮಾತ್ರ. ಕೆಲವೊಮ್ಮೆ ಕಾಲಗತಿ ಬದಲಾಗುವಾಗ ಜಗತ್ತಿನಲ್ಲಿ ದುಷ್ಟ ಶಕ್ತಿಗಳು ಮೆರೆದಾಡುತ್ತವೆ. ಕೆಲವು ಕಾಲ ಮಾತ್ರ ಅವುಗಳನ್ನು ಶಿಷ್ಟ ಜನರು ನಿಗ್ರಹಿಸುತ್ತಾರೆ, ಕ್ರಮೇಣ ಶಕ್ತಿಗುಂದುತ್ತಾರೆ. ಆಗ ದುಷ್ಟ ಜನರು ತಾಂಡವವಾಡುತ್ತಾರೆ. ಎಲ್ಲೆಲ್ಲೂ ಅನಾಚಾರ, ಅಕ್ರಮಗಳು ವಿಜೃಂಭಿಸುತ್ತವೆ. ಬೇರೆ ಎಲ್ಲ ಪ್ರಯತ್ನಗಳೂ ವಿಫಲವಾಗಿ, ಜನರು ಭಗವಂತನನ್ನೇ ಮೊರೆಯಿಟ್ಟು ಪ್ರಾರ್ಥಿಸುತ್ತಾರೆ. ಭಗವಂತನು ಅವರನ್ನು ಉದ್ಧರಿಸುವ ಸಲುವಾಗಿ ದಿವ್ಯವಾದ ಜನ್ಮವನ್ನು ತಳೆಯುತ್ತಾನೆ; ತನ್ನ ಅಸಾಧಾರಣವೂ ಅದ್ಭುತವೂ ಆದ ಲೀಲೆಯಿಂದ ಜಗತ್ತನ್ನು ಆಶ್ಚರ್ಯಚಕಿತಗೊಳಿಸುತ್ತಾನೆ.

ಇಂಥ ಹಲವಾರು ಅವತಾರಗಳಿವೆ ಎಂದು ಭಾಗವತ ಹೇಳುತ್ತದೆ. ಕಾಲದ ಅಗತ್ಯಕ್ಕೆ ತಕ್ಕಂತೆ ಹಲವಾರು ಅವತಾರಗಳನ್ನು ಎತ್ತಿ ಬರುವ ಭಗವಂತ, ತನ್ನ ಕಾರ್ಯ ಮುಗಿದ ಕೂಡಲೇ ಈ ಜಗತ್ತಿನಿಂದ ನಿರ್ಗಮಿಸುತ್ತಾನೆ. ಅದೇ 'ಲೀಲಾವಸಾನ'. ಕೆಲವೆಡೆ ಅವತಾರಗಳು ಅನಂತವೆನ್ನಲಾಗಿದೆ, ಇನ್ನು ಕೆಲವೆಡೆ ಹತ್ತು ಅವತಾರ (ದಶಾವತಾರ) ಎಂದೂ ಎಣಿಕೆ ಹಾಕಿದ್ದಿದೆ. ಉಪನಿಷತ್ತಿನಲ್ಲಿ **'ತತ್ಸೃಷ್ಟ್ವಾ ತದೇವಾನುಪ್ರಾವಿಶತ್'** ('ಭಗವಂತನು ಜಗತ್ತನ್ನು ಸೃಷ್ಟಿಸಿ, ಅದನ್ನೇ ಪ್ರವೇಶಿಸಿದನು') *(ತೈತ್ತಿರೀಯ ಉಪನಿಷತ್, ೨.೬)* ಎಂದು ಹೇಳಿರುವ ಮಾತು, ಅವತಾರಗಳ ಮೂಲಕ ಅಕ್ಷರಶಃ ಸತ್ಯವೆನಿಸುವುದು. ಉಪನಿಷತ್ತಿನಲ್ಲಿ ಅಂತರ್ಯಾಮಿ ತತ್ತ್ವವನ್ನು ವಿವರಿಸಲು ಈ ಮಾತು ಬಂದಿದೆಯಾದರೂ, ಅವತಾರವನ್ನು ಈ ತತ್ತ್ವದ ಹಿನ್ನೆಲೆಯಿಂದಲೂ ಅರ್ಥಮಾಡಿಕೊಳ್ಳಬಹುದಾಗಿದೆ.

ಆರಂಭದ ಕಥೆಯಲ್ಲಿ ಬಂದಿರುವ ಪ್ರಶ್ನೆ: ಸರ್ವಶಕ್ತ ಭಗವಂತನು ಎಲ್ಲವನ್ನೂ ಮಾಡಬಲ್ಲನಾದರೆ, ಸಂಪೂರ್ಣ ಒಳಿತನ್ನೇ ಏಕೆ ಜಗತ್ತಿನಲ್ಲಿ ಉಳಿಸಲಿಲ್ಲ? – ಈ ಪ್ರಶ್ನೆಗೆ ಉತ್ತರ ಇಲ್ಲೇ ಅಡಗಿದೆ. ಜಗತ್ತನ್ನು ಸೃಷ್ಟಿಮಾಡಿದ ಭಗವಂತ ಒಳಿತು–ಕೆಡಕು, ಸುಖ–ದುಃಖ, ಧರ್ಮ–ಅಧರ್ಮ, ಈ ದ್ವಂದ್ವವನ್ನು ಆಧರಿಸಿಯೇ ಜಗತ್ತಿನ ಆಗುಹೋಗುಗಳನ್ನು ನಿಯಂತ್ರಿಸುತ್ತಾನೆ; ಜೀವ, ಜಗತ್ತು ಆಸೆಯ ಬೆನ್ನು ಹತ್ತಿ ಹೋಗುವಂತೆ ಮಾಡುತ್ತಾನೆ. ಹೀಗೆ ಸೃಷ್ಟಿ ನಿರಂತರ ಮುಂದುವರಿಯುವ ಮೂಲಕ, ಜಗತ್ತಿನ ಎಲ್ಲ ಜಡ–ಚೈತನ್ಯಾತ್ಮಕ ವಸ್ತುಗಳ ಅನುಭವಗಳನ್ನು ಅವುಗಳ ಅಂತರ್ಯಾಮಿಯಾದ ತಾನೂ ಅನುಭವಿಸುತ್ತ , ದೇವರು ತನ್ನ ಲೀಲೆಯನ್ನು ನಡೆಸುತ್ತಾನೆ. ಇದೊಂದು ಆಟ, ಭಗವಂತ ತಾನೊಬ್ಬನೇ ಆಡುವ ಆಟ. ಸೃಷ್ಟಿ ಮಾಡಿದ ಭಗವಂತನನ್ನು ಸ್ತ್ರೀಯಾಗಿ 'ಪ್ರಕೃತಿ' ಎಂಬುದಾಗಿ ಭಾವಿಸಿಕೊಂಡಾಗ ಆಕೆ 'ಭಗವತಿ', 'ಜಗನ್ಮಾತೆ', 'ಆದಿಮಾಯೆ' ಎನ್ನಿಸಿಕೊಳ್ಳುತ್ತಾಳೆ. ಸಮಸ್ತ ಜಗತ್ತು ಆಕೆಯ ಆಟದಂಗಳ; ಜೀವ–ಜಗತ್ತುಗಳೊಂದಿಗೆ ಆಕೆ ಆಟವಾಡುತ್ತಾಳೆ. ಸೃಷ್ಟಿ–ಪ್ರಳಯ, ಹುಟ್ಟು–ಸಾವು, ಉಬ್ಬರ–ಇಳಿತ, ಇವೆಲ್ಲವೂ ಈ ಆಟದ ಒಂದೊಂದು ಭಾಗಗಳು. ಈ ಅನಂತ ಲೀಲೆಯಲ್ಲಿ ಕೆಲವರು ಮಾತ್ರ ಆಕೆಯ (ಅಥವಾ 'ಆತನ') ಅಸ್ತಿತ್ವವನ್ನು, ಆಟವನ್ನು ಅರಿಯುತ್ತಾರೆ; ಅವರಿಗೆ ಭಗವಂತನ ಲೀಲಾವಿನೋದ ಅರ್ಥವಾಗುತ್ತದೆ. ಹಾಗೆ ಅರ್ಥವಾದಾಗಲೇ ಅವರಿಗೆ ಈ ಭಗವಲ್ಲೀಲೆಯಿಂದ ಬಿಡುಗಡೆ, ಜನನ ಮರಣಗಳ ಬಂಧನದಿಂದ ಮುಕ್ತಿ. ಅವರು ಇನ್ನುಮುಂದೆ ಪ್ರಪಂಚದ ಆಟದಲ್ಲಿ ಭಾಗಿಗಳಲ್ಲ , ಅವರು ಭಗವಂತನನ್ನೇ ಸೇರುತ್ತಾರೆ. ಆದರೆ ಇದೂ ಭಗವಂತನ ಇಚ್ಛೆಗೆ ಅನುಗುಣವಾಗಿದೆ.

### ತತ್ತ್ವ – ಸಾಧನೆ

ಅತ್ಯಾಧುನಿಕವೆನ್ನಿಸುವ ಈ ಯುಗದಲ್ಲಿ ಈ ಬಗೆಯ ಪೌರಾಣಿಕ ಭಾವನೆಗಳನ್ನು ಹೇಗೆ ಸ್ವೀಕರಿಸಬೇಕು? ವೈಜ್ಞಾನಿಕ ವಿಧಾನದಲ್ಲೇ ಎಲ್ಲವನ್ನೂ ಅರ್ಥೈಸಿಕೊಳ್ಳುವ ಈ ಕಾಲಘಟ್ಟದಲ್ಲಿ, ಸಾಂಪ್ರದಾಯಿಕ ರೀತಿಯ ಈ ಅವತಾರ, ಲೀಲೆ – ಈ ಸಂಗತಿಗಳನ್ನು ಸತ್ಯವೆಂದು ಪರಿಗಣಿಸುವುದಾದರೂ ಹೇಗೆ?

ಇಂಥ ಸಂದೇಹ ಯಾರಿಗಾದರೂ ಉಂಟಾಗುವುದು ಸಹಜ. ಆಧುನಿಕತೆಯ ಪ್ರಭಾವ ನಮ್ಮ ಗ್ರಹಿಕೆಯ ವಿಧಾನವನ್ನು ವಿಚಿತ್ರ ರೀತಿಯಲ್ಲಿ ಪ್ರಭಾವಿಸಿರುವುದೇ ಇದಕ್ಕೆ ಕಾರಣ. ''ಭೌತಿಕ ಜಗತ್ತು, ಕಣ್ಣಿಗೆ ಕಾಣುವ ವಿಶ್ವ ಹಾಗೂ ಇಂದ್ರಿಯಗಳ ಹಿಡಿತಕ್ಕೆ ಸಿಗುವ ವಸ್ತುಗಳನ್ನು ಮಾತ್ರ ನಾನು ನಂಬುತ್ತೇನೆ, ಬೇರೆ ಯಾವುದನ್ನೂ ಅಲ್ಲ'' ಎಂಬ ಧೋರಣೆಯ ಹಿಂದಿರುವ ದೃಷ್ಟಿಕೋನ – ಮೊದಲನೆಯದಾಗಿ ಪಾಶ್ಚಾತ್ಯ ಭಾವನೆಗಳಿಂದ ಪ್ರೇರಿತ; ಎರಡನೆಯದಾಗಿ ವೈಜ್ಞಾನಿಕ ವಿಧಾನಗಳಿಂದ ಪ್ರೇರಿತ. ಈ ಎರಡೂ ದೃಷ್ಟಿಕೋನ